ಮಲನ್ ಮನೆಯೊಳಗೆ ಹೋಗಿ, ಮಗಳು ಪ್ರಪಂಚದ ಅರಿವೇ ಇಲ್ಲದಂತೆ ನಿರುಮ್ಮಳವಾಗಿ ಮಲಗಿರುವುದ್ನು ನೋಡಿದಳು. ಅವಳ ಕೆಂಪುಬಳೆಗಳು ದಿಂಬಿನ ಬದಿಯಲ್ಲಿದ್ದವು. ದಡ್ಡ ಹುಡುಗಿ. ನಿದ್ದೆಯಲ್ಲಿ ಈ ಕಡೆ ತಿರುಗಿದರೆ ಬಳೆಗಳು ಒಡೆದುಹೋಗಬಹುದೆಂದು ಮಲನ್‌ಳು ಬಳೆಗಳನ್ನು ಕಟ್ಟೆಯ ಮೇಲಿಡಲು ಎತ್ತಿಕೊಂಡಳು. ತನಗರಿವಿಲ್ಲದೆಯೇ ಅವಳು ಈ ಕೈಗೆ ಆರು, ಆ ಕೈಗೆ ಆರು ಬಳೆಗಳನ್ನು ತೊಟ್ಟುಕೊಂಡಳು. ಆ ಕತ್ತಲೆಯಲ್ಲೂ ಅವು ಮಿಂಚುತ್ತಿದ್ದವು. ಅವು ಬಳೆಗಾರನಿಂದ ನಿನ್ನೆ ತಾನೇ ಕೊಂಡುಕೊಂಡ ಹೊಸ ಬಳೆಗಳು.

ಮಲನ್ ತಿಂಗಳ ಬೆಳಕಿನ ಅಂಗಳಕ್ಕೆ—ತಲೆಯ ಮೇಲೆ ಮಿನಕಿಗಳ ದುಪ್ಪಟ್ಟಾ ಮತ್ತು ಕೈಗಳಲ್ಲಿ ಗಲ್ ಗಲ್ ಎನ್ನುವ ಕೆಂಪುಬಳೆಗಳನ್ನು ತೊಟ್ಟು ಬಂದಳು. ವಧುವಿನಂತೆ ಕೆಂಪೇರಿದಳು. ಅವಳ ನರನಾಡಿಗಳಲ್ಲಿ ರಕ್ತ ನುಗ್ಗಿಬಂತು.

ಬಾಗಿಲ ಮೇಲೆ ಮೆಲುವಾಗಿ ಶಬ್ದವಾಯಿತು. ಅವನೇ ಅದು. ಬೆದರಿದಂತೆ, ಬೇಕೋ ಬೇಡವೋ ಎಂಬಂತೆ ತಟ್ಟಿದಂತಹ ಶಬ್ದ. ಪತ್ರದಲ್ಲಿ ಬರೆದಿದ್ದಂತೆ ಅವನು ಬಂದಿದ್ದ; “ಕಾರ್ತಿಕದ ಹುಣ್ಣಿಮೆಯ ರಾತ್ರಿ, ನಿನ್ನ ಮನೆ ಬಾಗಿಲನ್ನು ತಟ್ಟುತ್ತೇನೆ. ನಿನಗೆ ಇಷ್ಟವಿದ್ದರೆ ಬಾಗಿಲನ್ನು ತೆಗೆ, ಇಲ್ಲವಾದರೆ ಬಿಡು. ಯಾವಾಗಿನಂತೆ, ನಾನು ಬಾಗಿಲನ್ನು ತಟ್ಟುತ್ತಲೇ ಇರುತ್ತೇನೆ.'' ಆ ತಕ್ಷಣ ಚಂದ್ರನು ಮೋಡದ ಹಿಂದೆ ಮರೆಯಾಗಿ ಪೂರ್ಣ ಕತ್ತಲಾಯಿತು. ಮಲನ್‌ಳ ಕಾಲುಗಳು ತಾವಾಗೇ ಕತ್ತಲೆಯ ಅಂಗಳಕ್ಕೆ ಕರೆದೊಯ್ದುವು. ನಡಗುವ ಕೈಗಳಿಂದ ಅವಳು ಬಾಗಿಲ ಅಗಳಿಯನ್ನು ತೆಗೆದಳು. ಮುಂದಿನ ಕ್ಷಣದಲ್ಲೇ ಅವಳು ಅವನ ಬಾಹುಗಳಲ್ಲಿದ್ದಳು. ತುಟಿಗೆ ತುಟಿಗಳು ಸೇರಿ, ಅವರ ಹಲ್ಲುಗಳು ಕಟಕಟಿಸಿದವು. ಇಷ್ಟು ದಿನಗಳಿಂದ ಕಟ್ಟಿಹಾಕಿದ್ದ ಆವೇಶ ಉಕ್ಕಿಹರಿದಿತ್ತು.

ಮಲನ್‌ಳಿಗೆ ತಾವು ಊರಾಚೆಗಿನ ಅರಳಿ ಮರದತ್ತ ಹೇಗೆ ನಡೆದುಹೋದೆವೆಂದು ಗೊತ್ತಿರಲಿಲ್ಲ, ಎಷ್ಟು ಹೊತ್ತು ಅಲ್ಲಿದ್ದೆವೆಂದೂ ಸಹ ಅರಿವಾಗಲಿಲ್ಲ. ಬೆಳಗಾಗುವ ಹೊತ್ತಿಗೆ ಊರಿನ ಬದಿಯಲ್ಲಿ ಹಾದುಹೋಗುವ ರೈಲಿನ ಶಬ್ದದಿಂದ ಅವಳಿಗೆ ಎಚ್ಚರವಾಯಿತು. ಪ್ರಿಯಕರನ ಆಲಿಂಗನದಿಂದ ಬಿಡಿಸಿಕೊಂಡು, ದುಪ್ಪಟ್ಟಾದಿಂದ ಮುಖವನ್ನು ಮರೆಮಾಡಿ ಮನೆಯೆಡೆಗೆ ಧಾವಿಸಿ ಬಂದಳು.



ಬಳೆಗಳನ್ನು ತನ್ನ ಕೈಗಳಿಂದ ತೆಗೆದು, ಮಗಳ ದಿಂಬಿನ ಬದಿ ಇಟ್ಟಳು. ಮಗಳ ಮಿನಕಿಯ ದುಪ್ಪಟ್ಟಾವನ್ನು ಮಡಚಿಟ್ಟು, ತನ್ನ ದುಪ್ಪಟ್ಟಾವನ್ನು ಹಾಕಿಕೊಂಡು, ಮಲಗಲು ಹೋದಳು. ತಕ್ಷಣವೇ ಎಂದೂ ಮಲಗೇ ಇರಲಿಲ್ಲವೆನ್ನುವಂತೆ ಗಾಢನಿದ್ರೆಗೆ ಜಾರಿದಳು.

ಅವಳಿಗೆ ಎಚ್ಚರವಾದಾಗ ಸೂರ್ಯನ ಬಿಸಿಲು ಅಂಗಳಕ್ಕೆ ಬಂದಿತ್ತು.

“ಮಗುವಿನಂತೆ ನಿದ್ರಿಸಿಬಿಟ್ಟಿದ್ದೆಯಲ್ಲಾ” ಮಿನ್ನಿ ತಮಾಷೆ ಮಾಡಿದಳು.

ಮಿನ್ನಿ ಆಗಲೇ ಅಂಗಳವನ್ನು, ಮನೆಯನ್ನು ಗುಡಿಸಿ